**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.462/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಜಗದೀಶ | ಪ್ರಾಸಾ-12 |
| ತಂದೆಯ ಹೆಸರು | : ಪಳನಿಸ್ವಾಮಿ | ಚಾಸಾ-21 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಸಿ. | ದಿನಾಂಕಃ 19.09.2025. |
| ವಾಸಸ್ಥಳ | : ಗೋಣಿಬೀಡು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2019 ರಿಂದ 2024 ರವರೆಗೆ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.02.11.2023 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ನಿರತರಾಗಿದ್ದಾಗ ಚಾಸಾ20 ರವರು ಪ್ರಸ್ತುತ ಪ್ರಕರಣದ ಚಾಸಾ1 ರವರ ದೈಹಿಕ ಸುಸ್ಥಿತಿಯ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸದರಿ ಪರೀಕ್ಷಯ ವರದಿಯನ್ನು ಠಾಣೆಯಲ್ಲಿ ಹಾಜರುಪಡಿಸುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ಚಾಸಾ1 ರವರನ್ನು ಬಣಕಲ್ ನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಚಾಸಾ14 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸದರಿಯವರು ಚಾಸಾ1 ರವರಿಗೆ ವೈದ್ಯಕೀಯ ಪರೀಕ್ಷಗೆ ಮಾಡಿದ್ದು ಸದರಿ ವರದಿಯನ್ನು ನಾನು ಠಾಣೆಗೆ ಬಂದು ಚಾಸಾ20 ರವರಿಗೆ ನೀಡಿರುತ್ತೇನೆ.

ದಿ.20.01.2024 ರಂದು ಚಾಸಾ-26 ರವರು ನನ್ನನ್ನು ಚಾಸಾ22 ಮತ್ತು ಚಾಸಾ23 ರವರನ್ನು ಕರೆದು, ಈ ಪ್ರಕರಣದ ಆರೋಪಿಯದಾ ಚಂದ್ರುರವರು ಸಬ್ಬೇನಹಳ್ಳಿ ಗ್ರಾಮದಲ್ಲಿ ಇರುವ ಮಾಹಿತಿಯು ತಿಳಿದುಬಂದಿರುವುದನ್ನು ನಮಗೆ ತಿಳಿಸಿದ್ದು ನಂತರ ನಾವು ಅದೇ ದಿನ ಮದ್ಯಾಹ್ನ 3 ಗಂಟೆ ಸಮಯಕ್ಕೆ ಸಬ್ಬೇನಹಳ್ಳಿ ಗ್ರಾಮಕ್ಕೆ ಹೋಗಿದ್ದು ಅರೋಪಿಯನ್ನು ದಸ್ತಗಿರಿ ಮಾಡಿ ಠಾಣೆಗೆ ಹಾಜರುಪಡಿಸಿರುತ್ತೇವೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆ ದಿನ ನಾವು ದಸ್ತಗಿರಿ ಮಾಡಿದ್ದ ವ್ಯಕ್ತಿ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಕೆ.ಸಿ.ಸಿ, ಆರೋಪಿ ಪರ ವಕೀಲರಾದ ಶ್ರೀ ಹೆಚ್.ಎಸ್.ಆರ್.**

**ವಕೀಲರ ಪರವಾಗಿಃ**

ನನಗೆ ವೈಯಕ್ತಿಕವಾಗಿ ಆರೋಪಿಯ ಪರಿಚಯ ಇರುವುದಿಲ್ಲ. ದಿ.20.04.2024 ರಂದು ಠಾಣೆಯಿಂದ ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ದಿನ ಸಬ್ಬೇನಹಳ್ಳಿಗೆ ನಾವು ನಮ್ಮ ಖಾಸಗಿ ವಾಹನದಲ್ಲಿ ಹೋಗಿರುತ್ತೇವೆ. ನಾವು ಠಾಣೆಯಿಂದ 2.50 ರ ಸಮಯಕ್ಕೆ ಹೊರಟಿರುತ್ತೇವೆ. ನನಾಗಾಗಲಿ ಚಾಸಾ22 ಮತ್ತು 23 ರವರಿಗೆ ಆರೋಪಿಯ ವೈಯಕ್ತಿಕ ಪರಿಚಯ ಇರುವುದಿಲ್ಲ. ಆರೋಪಿಯ ಸಬ್ಬೇನಹಳ್ಳಿಯ ಸರ್ಕಲ್ ಬಳಿ ಇರುತ್ತಾರೆ. ನಮ್ಮ ಠಾಣೆಯಿಂದ ಬರುವ ರಸ್ತೆಯ ಎಡಭಾಗದಲ್ಲಿ ಇರುತ್ತಾರೆ. ಆರೋಪಿಯ ಚಹರೆಯನ್ನು

ಚಾಸಾ1 ರವರಿಗೆ ಹಲ್ಲೆ ಮಾಡಿದ್ದ ವಿಡಿಯೋದಲ್ಲಿ ನೋಡಿರುತ್ತೇವೆ. ಸದರಿ ಮಾಹಿತಿಯನ್ನು ನಾನು ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ದಸ್ತಗಿರಿ ಮಾಡಿದ ದಿನ ಆರೋಪಿಯ ದರಿಸಿದ ಉಡುಪಿನ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಆ ದಿನ ಆರೋಪಿಯ ವಾಹನ ಇತ್ತು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ಸಾಕ್ಷಿಯು ಮಂದುವರೆದು ತನಿಖಾದಿಕಾರಿ ನಮೂದಿಸಿರಬಹುದು ಎಂದು ನುಡಿಯುತ್ತಾರೆ. ಆರೋಪಿಯ ವಾಹನವನ್ನು ಅಮಾನತುಪಡಿಸಿಕೊಳ್ಳುವುದಕ್ಕೆ ನಾವು ಪ್ರಯತ್ನಿಸಿರುತ್ತೇವೆ. ಆರೋಪಿಯ ರಸ್ತೆಯ ಯಾವ ಬಾಗದಲ್ಲಿ ನಿಂತಿರುತ್ತಾರೆ ಎಂದು ನಮಗೆ ತಿಳಿಸಿರುವುದಿಲ್ಲ ಸದರಿ ವಿಷಯವನ್ನು ನಾವು ಕಾಲ್ಪನಿಕವಾಗಿ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡುವ ಪೂರ್ವದಲ್ಲಿ ನಮ್ಮ ಪರಿಚಯವನ್ನು ಅವರಿಗೆ ತಿಳಿಸಿರುತ್ತೇವೆ. ದಸ್ತಗಿರಿ ಮಾಡುವ ಪೂರ್ವದಲ್ಲಿ 5 ನಿಮಿಷಗಳ ಕಾಲ ಮಾತುಕತೆ ಮಾಡಿರುತ್ತೇವೆ. ಆ ದಿನ ಆರೋಪಿಯನ್ನು ಚಾಸಾ22 ಮತ್ತು 23 ರವರ ಒಟ್ಟಿಗೆ ಸೇರಿ ದಸ್ತಗಿರಿ ಮಾಡುವ ಮದ್ಯಾಹ್ನ 3.30 ರ ಸಮಯಕ್ಕೆ ಠಾಣೆಗೆ ಹಿಂತಿರುಗಿರುತ್ತೇವೆ. ದಿ.02.11.2023 ರಂದು ಚಾಸಾ1 ರವರನ್ನು ಮದ್ಯಾಹ್ನ 1 ಗಂಟೆಗೆ ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಕಾಲುಗಂಟೆ ಸಮಯ ಇರುತ್ತೇವೆ. ನಾವು ಮೇಲಾದಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.